**ಡಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 11.06..2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎಸ್.ಎಂ, ವಕೀಲರಿಂದಃ**

ನಿಡಿ-40 ರಂತೆ ಮಾಡಿರುವ ಆದೇಶದಲ್ಲಿ ಮೂಲ ದಾವೆ ಸಂಖ್ಯೆ 78/2007 ರಲ್ಲಿನ ತೀರ್ಪು ಮತ್ತು ಡಿಕ್ರಿಯ ಆದೇಶವನ್ನು ಉಲ್ಲಂಘಿಸಿಲ್ಲವೆಂದು ಆದೇಶ ಮಾಡಿರುತ್ತಾರೆ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ನಿಡಿ-42 ರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಿಡಿ-42 ರಲ್ಲಿ ಯಾವ ಸರ್ವೆ ನಂಬರ್ ಮತ್ತು ಯಾವ ಸ್ವತ್ತು ಎಂದು ಅದರ ನಂಬರನ್ನು ನಮೂದಿಸಿಲ್ಲ ಎಂದರೆ ಇರಬಹುದು. ನಿಡಿ-44 ರಂತೆ ಸಲ್ಲಿಸಿರುವ ದಾವೆಯಲ್ಲಿ ನಾನು ಮತ್ತು ವಾದಿ ಪಕ್ಷಗಾರರಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳಾಗಿರುವುದಿಲ್ಲ ಎಂದರೆ ನನಗೆ ಸೇರಿದ 10 ಗುಂಟೆಗೆ ಸಂಬಂಧಪಟ್ಟ ದಾಖಲೆಗಳಾಗಿರುತ್ತವೆ. ಸದರಿ 10 ಗುಂಟೆ ನನ್ನ ತಂದೆ 25.06.1963 ರಂದು ಕ್ರಯಪತ್ರದ ಮೂಲಕ ಖರೀದಿಸಿರುವ ಆಸ್ತಿಯಾಗಿರುತ್ತದೆ. ನಾನು ಹೇಳುವ 10 ಗುಂಟೆ ಆಸ್ತಿಯೆ ಬೇರೆ ಮತ್ತು ದಾವಾ ಸ್ವತ್ತು ಬೇರೆ ಆಸ್ತಿಯಾಗಿರುತ್ತದೆ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ನನ್ನ ತಂದೆ ಕ್ರಯದ ಮೂಲಕ ಪಡೆದ ಸ್ವತ್ತಾಗಿರುತ್ತದೆ ಎಂದು ಸುಳ್ಳುಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ 10 ಗುಂಟೆ ಆಸ್ತಿ ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನನಗೆಸೇರಿದ 10 ಗುಂಟೆ ಆಸ್ತಿ ಹಾಗು ದಾವಾ ಆಸ್ತಿ ಅಸ್ತಿತ್ವದಲ್ಲಿರುವ ಬಗ್ಗೆ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿದರೆ ನನ್ನದೇನೂ ಅಭ್ಯಂತರವಿರುವುದಿಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**